## ನಿಮ್ಮೊಡನೆ

# ಹದಿಹರೆಯದಲ್ಲಿ ತಾಯ್ತನದ ಭಾರ ಹೊರುತ್ತ...

**ನಮ್ಮ ನಡುವೆಯೇ ಹದಿಹರೆಯದ ಹೆಣ್ಣುಮಕ್ಕಳು ಹೊಂಬಣ್ಣದ ಕನಸು ಕಂಡು, ಮಹತ್ವಾಕಾಂಕ್ಷಿಗಳಾಗಿ ಸ್ವಾವಲಂಬಿಯಾಗುವ ದಾರಿಯಲ್ಲಿಯೇ, ಮಗುವನ್ನು ಹೊತ್ತು, ಹೆತ್ತು, ಪುಟ್ತಾಯಿಗಳಾಗುತ್ತಿದ್ದಾರೆ. ಈ ತಾಯಂದಿರೂ, ಎಳೆ ಕೂಸುಗಳೂ ನಮ್ಮ ಸಮಾಜದ ದೌರ್ಬಲ್ಯವನ್ನೂ ದಾಖಲಿಸುತ್ತಿವೆ.**

ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಒಂದೆರಡಲ್ಲ ಮೂರು ಪ್ರಕರಣಗಳು ತಾಯಂದಿರ ಮನಸಿನಲ್ಲಿ ಆತಂಕ ಮೂಡಿಸಿದವು. ಹದಿಹರೆಯದ ಹೆಣ್ಣುಮಕ್ಕಳು ಶಾಲೆಯಲ್ಲಿಯೇ ಹೆರಿಗೆಯಾಗಿ ತಾಯಿ ಪಟ್ಟ ಹೊತ್ತರು. ಇವು ವರದಿಯಾದ ಪ್ರಕರಣಗಳು. ಗಾಬರಿಯಾಗಬೇಕಾದ ಅಂಶವೆಂದರೆ ಕತ್ತಲೆಯಲ್ಲಿಯೇ ಉಳಿಯುವ, ಮಕ್ಕಳ ಬಾಲ್ಯ ಅಳಿಯುವ ಪ್ರಕರಣಗಳು ಅದೆಷ್ಟೋ..

ರಾಜ್ಯದಲ್ಲಿ ಹದಿಹರೆಯದ ತಾಯಂದಿರ ಪ್ರಕರಣಗಳ ಸಂಖ್ಯೆ ಕಡಿಮೆಯೇನೂ ಇಲ್ಲ. ಅನಕ್ಷರತೆ ಮತ್ತು ಬಡತನದಿಂದಾಗಿ ಬಾಲ್ಯವಿವಾಹ ಪದ್ಧತಿಗೆ ಕಡಿವಾಣ ಹಾಕಲಾಗುತ್ತಿಲ್ಲ, ಎಳವೆಯಲ್ಲಿಯೇ ಹೆರುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚುತ್ತಿದೆ ಎನ್ನಲಾಗುತ್ತಿತ್ತು. ಬಾಲ್ಯವಿವಾಹ ತಡೆಗಟ್ಟುವ ಕಾನೂನು ಜಾರಿಯಾದ ಮೇಲೆ ಸಂಖ್ಯೆಯಲ್ಲಿ ಇಳಿಕೆ ಕಂಡು ಬಂದಿದೆ. ಆದ್ರೆ ತಾಯಂದಿರ ಸಂಖ್ಯೆಯಲ್ಲಿ ಆಗ್ತಿಲ್ಲ. 2021–22ರ ಸಾಲಿನಲ್ಲಿ 33621 ಹದಿಹರೆಯದ ಗರ್ಭಿಣಿಯರ ಸಂಖ್ಯೆ ದಾಖಲಾಗಿತ್ತು. ಬೆಂಗಳೂರು ನಗರ ಜಿಲ್ಲೆಯಲ್ಲಿ 4324 ಪ್ರಕರಣಗಳಿದ್ದವು. 2023–24ರ ಸಾಲಿನಲ್ಲಿ 8631 ಪ್ರಕರಣಗಳು ವರದಿಯಾಗಿವೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಅಂಕಿ ಅಂಶ ಕಡಿಮೆ ಎನಿಸಬಹುದು. ಇವು ವರದಿಯಾದ ಪ್ರಕರಣಗಳು ಎಂಬುದು ನಮ್ಮ ಗಮನದಲ್ಲಿರಬೇಕು. ವರದಿಯಾಗದೇ ಇರುವವು ಅಸಂಖ್ಯಾತ. ಆರ್.ಸಿ.ಎಚ್ (ರಿಪ್ರೊಡಕ್ಟಿವ್ ಅಂಡ್ ಚೈಲ್ಡ್ ಹೆಲ್ತ್) ಇಲಾಖೆಯ ವರದಿ ಈ ಅಂಕಿಗಳನ್ನು ನೀಡಿದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಇವೆಲ್ಲ ವರದಿಯಾಗಬೇಕಾದ ವಿಷಯಗಳೇ ಅಲ್ಲ ಎನಿಸುವಷ್ಟು ಸಹಜವಾಗಿವೆ. ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಮೈಸೂರು ಜಿಲ್ಲೆಗಳಲ್ಲಿಯೂ ಈ ಸಂಖ್ಯೆ ಕಡಿಮೆ ಏನಿಲ್ಲ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ವರದಿಯಾಗದೇ ಇರುವುದರಿಂದ ಅಲ್ಲಿ ಪ್ರಮಾಣ ಕಡಿಮೆ ಎನಿಸಬಹುದು. ಸಮಸ್ಯೆಯ ತೀವ್ರತೆಯಲ್ಲಿ ಕಡಿಮೆ ಇಲ್ಲ. ಲೈಂಗಿಕ ದೌರ್ಜನ್ಯ ಇರಬಹುದು, ಸಾಮಾಜಿಕ ಒತ್ತಡವಿರಬಹುದು, ಬಾಲ್ಯವಿವಾಹಗಳು ಮತ್ತು ಕಿರುಕುಳಗಳಿರಬಹುದು, ಹೆಣ್ಣುಮಕ್ಕಳು ಅರಳಬೇಕಾದ ಸಮಯದಲ್ಲಿ ಹೆರಿಗೆನೋವಿನಿಂದ ನರಳುತ್ತಿದ್ದಾರೆ. ಮಗುವೊಂದು ಗರ್ಭಿಣಿಯಾಗಿರುವುದು ತಿಳಿದೇ ಇರದಷ್ಟು ಶಿಕ್ಷಕಿಯರು, ಹೆತ್ತವರು ಕುರುಡರಾಗಲು ಸಾಧ್ಯವೇ? ಶೌಚಾಲಯದಲ್ಲಿ ವಿದ್ಯಾರ್ಥಿನಿಗೆ ಹೆರಿಗೆ ಆಗುವವರೆಗೂ ಶಿಕ್ಷಕಿ, ವಾರ್ಡನ್ ಯಾರಿಗೂ ಗೊತ್ತಾಗದೇ ಇರುವಷ್ಟು ಗೋಪ್ಯ ಕಾಪಾಡಲು ಆ ಎಳೆ ಮಗುವಿಗೆ ಸಾಧ್ಯವೇ?

ಬಡತನ, ಅನಕ್ಷರತೆಯಿಂದಾಗಿ ಹದಿಹರೆಯದ ತಾಯ್ತನ ದರದಲ್ಲಿ ಹೆಚ್ಚಳ ಇತ್ತು ಎನ್ನುವ ವಾದವಿತ್ತು. ಇದೀಗ ಹದಿಹರೆಯದ ಮಕ್ಕಳು ಸಹಮತಿಯ ಲೈಂಗಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವುದು ಗುಟ್ಟಾಗಿ ಏನೂ ಉಳಿದಿಲ್ಲ. ಬಹುತೇಕ ನಗರ ಪ್ರದೇಶದ ಮಕ್ಕಳು ಲೈಂಗಿಕ ಜೀವನದಲ್ಲಿ ಸಕ್ರಿಯರಾಗಿರುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಈ ಮಕ್ಕಳಲ್ಲಿ ಜಾಗೃತಿ ಇದೆ. ಇವರು ಮುನ್ನೆಚ್ಚರಿಕೆವಹಿಸುತ್ತಿದ್ದಾರೆ. ಇಲ್ಲದಿದ್ದಲ್ಲಿ ಬಲುಬೇಗ ವೈದ್ಯರನ್ನು ಸಂಪರ್ಕಿಸುತ್ತಾರೆ. ತಮ್ಮ ಬದುಕಿನ ಆದ್ಯತೆ ಮತ್ತು ಆಯ್ಕೆಗಳ ಕುರಿತು ಅತಿ ಸ್ಪಷ್ಟ ನಿಲುವು ಹೊಂದಿದ್ದಾರೆ. ಜೆನ್ ಝೀ (1995–2009ರಲ್ಲಿ ಹುಟ್ಟಿದ ಮಕ್ಕಳು) ಜೊತೆಗೆ ಜೆನ್ ಅಲ್ಫಾ (2010–2024ರ ಅವಧಿಯಲ್ಲಿ ಜನಿಸಿದ ಮಕ್ಕಳು) ತಮ್ಮ ಬಯಕೆ ಮತ್ತು ಬೇಡಿಕೆಗಳ ಬಗ್ಗೆ ಸ್ಪಷ್ಟ ನಿಲುವು ತಳೆದಿದ್ದಾರೆ.


ಸಾಮಾಜಿಕ ಜಾಲತಾಣಗಳಲ್ಲಿ ಕಳೆದುಹೋಗಿರುವ ಮಕ್ಕಳು ಅತಿ ಬೇಗ ಬಾಂಧವ್ಯಗಳ ಸಿಕ್ಕುಗಳಲ್ಲಿ ತೊಳಲಾಡುತ್ತಿದ್ದಾರೆ. ಅವರ ಲೈಂಗಿಕ ಅಪೇಕ್ಷೆಗಳಿಗೆ ಸೆಕ್ಸ್‌ಟಿಂಗ್, ಚಾಟುಗಳಂತಹ ಅಗ್ಗದ ಮನರಂಜನೆಯೊಂದಿಗೆ ಯುವಕ ಯುವತಿಯರಿಬ್ಬರೂ ಪರಸ್ಪರ ಸುಲಭವಾಗಿ ಲಭ್ಯವಾಗುತ್ತಿದ್ದಾರೆ. ಆದರೆ ಕೆಲ ಕ್ಷಣಗಳ ಲೈಂಗಿಕಾಸಕ್ತಿಗೆ ಹೆಣ್ಣುಮಗು ಮತ್ತು ಅದರ ಕೂಸು ಎರಡೂ ಜೀವಗಳೂ ಜೀವನಪೂರ್ತಿ ಕನಲಿ ಹೋಗುತ್ತವೆ.

ಆತಂಕದ ವಿಷಯವೇನೆಂದರೆ ಈ ತಲೆಮಾರಿಗೆ, ತಮ್ಮ ದೇಹ, ಆರೋಗ್ಯ ಮಾನಸಿಕ ಸ್ವಾಸ್ಥ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಸದ್ಯದ ಪರಿಸ್ಥಿತಿಯನ್ನು ನಿಭಾಯಿಸುವ ಜಾಣ್ಮೆ ಕಲಿತಿದ್ದಾರೆ. ತಮ್ಮ ಎದುರಿಗಿರುವ ವಿಸ್ತಾರವಾದ ಬದುಕಿನ ಬಗೆಗೆ ಉಡಾಫೆಯೇ ಮನೆ ಮಾಡುತ್ತಿದೆ. ಒಂದು ತಲೆಮಾರು ಹೀಗೆ ಸಾಗುತ್ತಿದ್ದರೆ, ಇದೇ ತಲೆಮಾರಿನಲ್ಲಿ, ಇನ್ನೊಂದು ಕಡೆ ಅಜ್ಞಾನದಿಂದ, ಬಡತನದಿಂದ ಬದುಕು ಮಣ್ಣಾಗುತ್ತಿದೆ. ಈ ಎರಡರ ನಡುವಿನ ಅಂತರ ಕಡಿಮೆ ಮಾಡುವುದು ಸಮಗ್ರ ಶಿಕ್ಷಣದಿಂದ ಮಾತ್ರ ಸಾಧ್ಯ.

ಮಕ್ಕಳಲ್ಲಿ ಸ್ವಾವಲಂಬಿಯಾಗುವ ಹಿರಿದಾದ ಕನಸು ಬಿತ್ತುವ ಬದಲು ಅವರನ್ನು ಸುಖದ ಸರಕುಗಳಾಗಿಸುತ್ತಿರುವ ಎಲ್ಲ ಪುರುಷರೂ ಶಿಕ್ಷಿತರಲ್ಲ. ಕೇವಲ ಅಕ್ಷರಸ್ಥರು. ಶಿಕ್ಷೆಗೆ ಅರ್ಹರಾದವರು. ಮಕ್ಕಳಲ್ಲಿ ತಮ್ಮ ದೇಹರಚನೆ, ದೇಹದ ಬೇಕುಬೇಡಗಳನ್ನು ನಿಭಾಯಿಸುವ ಕಲೆ ಕಲಿಸದಿದ್ದಲ್ಲಿ ಶಿಕ್ಷಣ ಸಂಪೂರ್ಣ ಹೇಗಾಗುವುದು? ಶಿಕ್ಷಣ ಪದ್ಧತಿಯಲ್ಲಿ ಕೇವಲ ಲೈಂಗಿಕ ಶಿಕ್ಷಣದ ಕುರಿತು ಅಷ್ಟೇ ಅಲ್ಲ, ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶಗಳ ಕುರಿತೂ, ಹಾರ್ಮೋನುಗಳ ಏರುಪೇರಿನ ಕುರಿತೂ ಕಲಿಸಬೇಕಾಗಿದೆ. ಜೊತೆಗೆ ಅಸುರಕ್ಷಿತ ಲೈಂಗಿಕ ಸಂಪರ್ಕದ ಪರಿಣಾಮಗಳು, ಕಾನೂನು ಏನು ಹೇಳುತ್ತದೆ ಎಂಬ ಪಾಠಗಳೂ ಬರಬೇಕಿವೆ.

ಅಂಕಗಳಿಗಾಗಿಯೇ ಶಿಕ್ಷಣ, ಅಂಕಗಳಿಂದಲೇ ಭವಿಷ್ಯ ಎಂದುಕೊಂಡಿರುವ ಪೋಷಕರೂ ತಮ್ಮ ಮಕ್ಕಳ ಚಲನವಲನಗಳ ಮೇಲೆ ಒಂದು ನಿಗಾ ಇಟ್ಟಿರಬೇಕು. ಅವರ ಕಂಗಳಲ್ಲಿ ಎಳವೆಯ ಮುಗ್ಧತೆ, ಯೌವ್ವನದ ತುಂಟತನ ಗುರುತಿಸುವಂತೆಯೇ, ನಿಸ್ತೇಜ ದೃಷ್ಟಿ, ಎಲ್ಲೋ ಕಳೆದುಹೋಗುವ ಮಾತುಗಳು, ಮತ್ತು ಮುಚ್ಚಿದ ಕೋಣೆಯಲ್ಲಿ ಕಳೆದುಹೋಗುವ ಮನಗಳನ್ನು ಗಮನ ಸೆಳೆಯುವ ಕೆಲಸವೂ ಮಾಡಬೇಕಾಗಿದೆ.

■ ರಶ್ಮಿ ಎಸ್



ವಿಜಯ